ಪಿಡಬ್ಲ್ಯೂ: 1

**ಸಾಕ್ಷಿಯನ್ನು ಪುನಃ ದಿಃ 14-06-2018 ರಂದು ಕರೆಸಿ ಪ್ರಮಾಣೀಕರಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್‌ಎಸ್ ವಕೀಲರಿಂದಃ**

ದೂರು ಕೊಟ್ಟ 10 ದಿನಗಳ ಮೇಲೆ ನನ್ನ ಮುಂದುವರೆದ ಹೇಳಿಕೆಯನ್ನು ಮಾಡಿಕೊಂಡರು. ಒಡವೆಯನ್ನು ಸ್ವಾಧೀನ ಮಾಡಿಕೊಂಡ ದಿನ ಮಹಜರ್ ಮಾಡಿದ್ದು, ನನ್ನ ಹೇಳಿಕೆ ಮಾಡಿಕೊಂಡಿಲ್ಲ. ಕಾರನ್ನು ವಶಪಡಿಸಿಕೊಂಡ ದಿನವೂ ನನ್ನ ಹೇಳಿಕೆ ಮಾಡಿಕೊಂಡಿಲ್ಲ. ಆ ಎರಡೂ ಮಹಜರ್‌ಗಳು ಆದ ನಂತರ ಪೊಲೀಸರು ನನ್ನ ಮರು ಹೇಳಿಕೆ ಮಾಡಿಕೊಂಡರೋ ಇಲ್ಲವೋ ನೆನಪಿಲ್ಲ. ನನ್ನ ಮರು ಹೇಳಿಕೆಯನ್ನು ಮಹಜರ್‌ಗಳಿಗೆ ಮೊದಲು ಮಾಡಿಕೊಂಡರೋ ಅಥವಾ ನಂತರದಲ್ಲಿ ಮಾಡಿಕೊಂಡರೋ ನೆನಪಿಲ್ಲ. ನನ್ನ ಮರು ಹೇಳಿಕೆಯನ್ನು ಯಾರು ಮಾಡಿಕೊಂಡರು ಎಂದು ನೆನಪಿಲ್ಲ. ಈ ಕೇಸಿನಲ್ಲಿ ಸಾಕ್ಷಿ ಕೊಡುವ ಮೊದಲು ನನ್ನ ಮರು ಹೇಳಿಕೆಯನ್ನು ನೋಡಿಕೊಂಡೆ. ಆಗ ದಿನಾಂಕ ನೋಡಿದ್ದು ನೆನಪಿಲ್ಲ.

ನಾನು ದಿಃ 10-07-2013 ರಂದು ನನ್ನ ಮಗಳ ಮನೆಯಿಂದ ಕೆಲಸಕ್ಕೆ ಹೋಗುವ ಮೊದಲು ಮನುಗೆ ಫೋನ್ ಮಾಡಿ ನೀರು ತರುವಂತೆ ಹೇಳಿರಲಿಲ್ಲ ಆದರೆ ಹಿಂದಿನ ದಿನ ಹೇಳಿದ್ದೆ. ದಿಃ 10-07-2013 ರಂದು ನನ್ನ ಮಗಳಿಗೆ ನೀರನ ಖ್ಯಾನ್ ಬರುತ್ತದೆ ಎಂದು ಹೇಳಿ 50/- ರೂ ಕೊಟ್ಟಿದ್ದೆ. ನಾನು ಆ 50/- ರೂಗಳನ್ನು ನನ್ನ ಮಗಳಿಗೆ ಹೇಳಿ ಶೋಕೇಸ್‌ನಲ್ಲಿ ಇಟ್ಟು ಹೋದೆ. ದಿಃ 10-07-2013 ರಂದು ಮದ್ಯಾಹ್ನ 1.30 ಕ್ಕೆ ಮನು ನೀರು ಖ್ಯಾನ್ ತಂದಿದ್ದ ಬಗ್ಗೆ ಮತ್ತು ಯಾರೂ ಬಾಗಿಲು ತೆಗೆಯುತ್ತಿಲ್ಲ ಎಂದು ಹೇಳಿದ್ದು, ನಾನು ಹೊರಗೆ ಇಟ್ಟು ಹೋಗುವಂತೆ ಹೇಳಿದ್ದು, ಆದರೆ ನನಗೆ ಸಮಯ ಸರಿಯಾಗಿ ನೆನಪಿಲ್ಲ.

ಮದ್ಯಾಹ್ನ ಸುಮಾರು 1.30 ರಲ್ಲಿ ನಾನು ಕೆಆರ್‌ಪುರಂ ಬಳಿ ಹೋಗುತ್ತಿದ್ದಾಗ ಕುಡಿಯುವ ನೀರು ಖಾನ್ ಹಾಕುವವನು ನನಗೆ ಫೋನ್ ಮಾಡಿ ಮನೆಯ ಬಳಿ ಬಂದು ಬಾಗಿಲು ತಟ್ಟಿದೆ ಮನೆಯಲ್ಲಿ ಯಾರೂ ಬಾಗಿಲು ತೆಗೆಯಲಿಲ್ಲ ಎಂದು ಹೇಳಿದ ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಮನು ಫೋನ್ ಮಾಡಿದ ನಂತರ ನಾನು ಮದ್ಯಾಹ್ನ 1.30 ಕ್ಕೆ ನನ್ನ ಮಗಳಿಗೆ ಫೋನ್ ಮಾಡಿದೆ ಎಂದರೆ ಸರಿ. ನನ್ನ ಮಗಳು ಫೋನ್ ತೆಗೆಯದೇ ಇದ್ದುದರಿಂದ ನನ್ನ ಹೆಂಡತಿಗೆ ಫೋನ್ ಮಾಡಿದೆ ಎಂದರೆ ಸರಿ. ನನ್ನ ಮಗಳು ಉತ್ತರ ಕೊಡದೇ ಇದ್ದುದರಿಂದ ನಮಗೆ ಗಾಬರಿಯಾಯಿತು. ಆ ಸಮಯದಲ್ಲಿ ನನಗೆ ಕೋಲಾರಕ್ಕೆ ವಾಪಸ್ಸು ಬರಲು ತೊಂದರೆ ಇತ್ತು ಕಾರಣ ನಮ್ಮ ಕಚೇರಿಯಲ್ಲಿ ಮೀಟಿಂಗ್ ಇದ್ದು, ನಾನು ಫೋನ್‌ನಲ್ಲಿ ಮಾತನಾಡಿಸುವ ಪ್ರಯತ್ನ ಮಾಡುತ್ತಿದ್ದೆ.

ನಾನು ನೋಡಲ್ ಆಫೀಸರ್ ಆಗಿದ್ದುದರಿಂದ ಶಿಕ್ಷಕರನ್ನು ಕರೆದು ಮೀಟಿಂಗ್ ಮಾಡಿ ವರದಿ ಸಲ್ಲಿಸಬೇಕಾಗಿತ್ತು. ಮೀಟಿಂಗ್ ಬಗ್ಗೆ ನಾನು ಲಿಖಿತ ನೋಟೀಸನ್ನು ಕೊಟ್ಟಿರಲಿಲ್ಲ ಆದರೆ ಇಸಿ ರವರಿಗೆ ಮಾಹಿತಿಯನ್ನು ಕೊಟ್ಟಿದ್ದೆ. ಆ ದಿನ ಮೀಟಿಂಗ್ ಆಗದೇ ಇದ್ದುದರಿಂದ ಯಾವುದೇ ಪ್ರೊಸೀಡಿಂಗ್ಸ್ ಬರೆದಿಲ್ಲ. ನಾನು ಆ ದಿನ ನಮ್ಮ ಕಚೇರಿಗೆ ಹೋಗಿಲ್ಲ ಮತ್ತು ಕೆಆರ್‌ಪುರಂನಿಂದಲೇ ಕೋಲಾರಕ್ಕೆ ವಾಪಸ್ಸು ಬಂದಿದ್ದೆ ಎಂದರೆ ಸರಿಯಲ್ಲ. ದಿಃ 10-07-2013 ರಂದು ನಮ್ಮ ಕಚೇರಿಯನ್ನು ಎಷ್ಟು ಗಂಟೆಗೆ ಬಿಟ್ಟೆ ಎಂದು ನೆನಪಿಲ್ಲ. ನನ್ನ ಹೆಂಡತಿ ಮತ್ತು ವೆಂಕಟೇಶ್ ನನ್ನ ಮಗಳು ಮತ್ತು ಮೊಮ್ಮಗು ತೀರಿಕೊಂಡಿದ್ದಾರೆ ಎಂದು ಫೋನ್‌ನಲ್ಲಿ ತಿಳಿಸಿದ ತಕ್ಷಣ ವಾಪಸ್ಸು ಬಂದೆ.

ನಾನು ಕಚೇರಿಯಲ್ಲಿದ್ದಾಗ ವೆಂಕಟೇಶ್ ಆ ಸಾವಿನ ಸುದ್ದಿಯನ್ನು ತಿಳಿಸಿದರು. ಆಗ ಸಮಯ ನೆನಪಿಲ್ಲ. ಅಲ್ಲಿಂದ ನೇರವಾಗಿ ನಾನು ಕೋಲಾರಕ್ಕೆ ವಾಪಸ್ಸು ಬಂದೆ. ನಾನು ಮದ್ಯದಲ್ಲಿ ಟ್ಯಾಕ್ಸಿ ಹತ್ತಿಕೊಂಡು ಕೋಲಾರಕ್ಕೆ ಬಂದೆ. ಕೆಆರ್‌ಪುರಂಗೆ ಮೊದಲು ಅಂದರೆ ಐಟಿಐ ಬಳಿಯಿಂದ ಟ್ಯಾಕ್ಸಿಯಲ್ಲಿ ಬಂದೆ. ಅಷ್ಟು ಹೊತ್ತಿಗೆ ನನಗೆ ಇಬ್ಬರು ಸತ್ತಿದ ವಿಷಯ ಗೊತ್ತಿತ್ತು. ನನ್ನ ಜೊತೆ ಟ್ಯಾಕ್ಸಿಯಲ್ಲಿ ಯಾರು ಬಂದರು ಎಂದು ನೆನಪಿಲ್ಲ. ಬೆಂಗಳೂರಿನಿಂದ ನೇರವಾಗಿ ನಾನು ಕೋಲಾರದ ಪೋಲೀಸ್ ಠಾಣೆಗೆ ಹೋಗಲಿಲ್ಲ. ನಾನು ನನ್ನ ಮಗಳ ಮನೆಯ ಬಳಿ ಹೋದಾಗ ವೆಂಕಟೇಶ್, ನನ್ನ ಹೆಂಡತಿ, ಪೊಲೀಸರು ಮತ್ತು ಇತರೆ ಜನರು ಸೇರಿದ್ದರು ಎಂದರೆ ಸರಿ. ನಂತರ ಹೇಳುತ್ತಾರೆ ಆಗ ಗಾಬರಿಯಲ್ಲಿ ಅಲ್ಲಿ ಯಾರಿದ್ದರು ಏನು ಎಂದು ನನಗೆ ನೆನಪಿಲ್ಲ ಮತ್ತು ಪ್ರಜ್ಞೆ ತಪ್ಪಿತ್ತು. ನಾನು ಅಲ್ಲಿಗೆ ತಲುಪಿದಾಗ ಬಹುಶಃ 4.30 ರಿಂದ 4.45 ಗಂಟೆ ಆಗಿತ್ತು.

ನಾನು ನನ್ನ ಮಗಳ ಮನೆಯ ಬಳಿ ಟ್ಯಾಕ್ಸಿಯಲ್ಲಿ ಹೋಗಿದ್ದೆ. ಟ್ಯಾಕ್ಸಿ ನಂಬರ್ ಮತ್ತು ಚಾಲಕನ ಹೆಸರು ಗೊತ್ತಿಲ್ಲ. ನನಗೆ ಪ್ರಜ್ಞೆ ಬಂದಾಗ ಸುಮಾರು 8.00-8.15 ಆಗಿತ್ತು. ನನಗೆ ಪ್ರಜ್ಞೆ ಹೋದಾಗ ವೈದ್ಯರಿಂದ ಚಿಕಿತ್ಸೆ ಕೊಡಿಸಿದ್ದರೋ ಇಲ್ಲವೋ ಗೊತ್ತಿಲ್ಲ. ನನಗೆ ಪ್ರಜ್ಞೆ ಬಂದ ನಂತರ ಪೋಲೀಸರು ಬಂದರು. ನನಗೆ ಪ್ರಜ್ಞೆ ಬಂದ ನಂತರ ಪೊಲೀಸರು ಬಂದವರು ನೇರವಾಗಿ ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ನನ್ನನ್ನು ಠಾಣೆಗೆ ಕರೆದುಕೊಂಡು ಹೋಗುವ ಮೊದಲು ಪೊಲೀಸರು ನನ್ನನ್ನು ವಿಚಾರ ಮಾಡಿದರೋ ಇಲ್ಲವೋ ನೆನಪಿಲ್ಲ ಆಗ ನನ್ನ ಜೊತೆ ಪೋಲೀಸ್ ಠಾಣೆಗೆ ವೆಂಕಟೇಶ್ ಮತ್ತು ನನ್ನ ಹೆಂಡತಿ ಬಂದರೋ ಇಲ್ಲವೋ ನೆನಪಿಲ್ಲ ಸುಮಾರು 500 ಜನ ಸುತ್ತುವರಿದಿದ್ದರು. ನನ್ನನ್ನು ಠಾಣೆಗೆ ಕರೆದುಕೊಂಡು ಹೋದ ಪೊಲೀಸರ ಹೆಸರು ಗೊತ್ತಿಲ್ಲ. ಇಬ್ಬರು ಪೇದೆಗಳು ಪೊಲೀಸ್ ಜೀಪ್‌ನಲ್ಲಿ ಕರೆದುಕೊಂಡು ಹೋದರು. ಸೀದ ಕೋಲಾರ ನಗರ ಠಾಣೆಗೆ ಕರೆದುಕೊಂಡು ಹೋದರು. ಪೊಲೀಸರು ನನ್ನನ್ನು ವೆಂಕಟೇಶ್ ರವರ ಮನೆಯಿಂದ ಬಹುಶಃ ಠಾಣೆಗೆ ಕರೆದುಕೊಂಡು ಹೋಗಿರಬಹುದು, ಆದರೆ ಸರಿಯಾಗಿ ನೆನಪಿಲ್ಲ. ವೆಂಕಟೇಶ್ ರವರ ಮನೆಗೆ ನನ್ನನ್ನು ಯಾರು ಯಾವ ರೀತಿ ಕರೆದುಕೊಂಡು ಹೋದರು ಎಂದು ನೆನಪಿಲ್ಲ.

ನನಗೆ ವೆಂಕಟೇಶ್ ರವರ ಮನೆಯಲ್ಲಿ ಇದ್ದಾಗ ಅಷ್ಟಾಗಿ ಪ್ರಜ್ಞೆ ಬಂದಿರಲಿಲ್ಲ, ಪೊಲೀಸ್ ಠಾಣೆಯಲ್ಲಿ ಪೂರ್ತಿ ಪ್ರಜ್ಞೆ ಬಂತು. ಪೊಲೀಸ್ ಜೀಪ್‌ನಲ್ಲಿ ನನ್ನನ್ನು ಯಾರೂ ವಿಚಾರಣೆ ಮಾಡಲಿಲ್ಲ, ಕೋಲಾರ ಪೋಲೀಸ್ ಠಾಣೆಗೆ ಹೋದಾಗ ನನಗೆ ಚೆನ್ನಾಗಿ ಮಾತನಾಡುವಷ್ಟು ಪ್ರಜ್ಞೆ ಬಂತು. ಆಗ ಪೊಲೀಸರು ನನ್ನನ್ನು ಘಟನೆಯ ಬಗ್ಗೆ ಕೇಳಿದರು, ಆದರೆ ನನಗೆ ಎಷ್ಟು ನೆನಪಿತ್ತೋ ಅಷ್ಟನ್ನು ಹೇಳಿದ್ದೆ. ನಾನು ಹೇಳಿದ್ದನ್ನು ಪೊಲೀಸ್ ಠಾಣೆಯಲ್ಲಿ ಟೈಪ್ ಮಾಡಿಕೊಂಡರು. ಕೈಯಲ್ಲಿ ಬರೆದುಕೊಂಡಿಲ್ಲ, ನನ್ನನ್ನು ಪ್ರಶ್ನೆ ಕೇಳಿದ ಪೊಲೀಸರು ಯಾರು ಎಂದು ಹೆಸರು ಗೊತ್ತಿಲ್ಲ, ಆದರೆ ಅಲ್ಲಿ 3-4 ಜನ ಇದ್ದು, ವಿಚಾರ ಮಾಡಿದರು. ಆಗ ಠಾಣೆಯಲ್ಲಿ ಪಿಎಸ್‌ಐ ರವರು ಮತ್ತು ಎಲ್ಲಾ ಅಧಿಕಾರಿಗಳು ಇದ್ದರು. ನಾನು ಹೇಳಿದ್ದನ್ನು ಟೈಪ್ ಮಾಡಿದ ಪೊಲೀಸರ ಹೆಸರು ಗೊತ್ತಿಲ್ಲ, ನಾನು ಪೋಲೀಸ್ ಠಾಣೆಯಲ್ಲಿ ಎಷ್ಟು ಹೊತ್ತು ಇದ್ದೆ ಎಂದು ನೆನಪಿಲ್ಲ, ಆದರೆ ಸಹಿ ಮಾಡುವವರೆಗೆ ಇದ್ದೆ. ಟೈಪ್ ಮಾಡಿದವರು ಸಹಿ ಮಾಡಿದರೋ ಇಲ್ಲವೋ ನೆನಪಿಲ್ಲ, ಟೈಪ್ ಮಾಡಿದ್ದನ್ನೆಲ್ಲಾ ಓದಿ ತಿಳಿಸಿದರು. ಓದಿ ಹೇಳಿದ ನಂತರ ನಾನು ಸಹಿ ಮಾಡಿದ್ದು, ನಿಜ ಆಗ ನಾನು ನಾನು ಹೇಳಿದ್ದೆಲ್ಲಾ ಅದರಲ್ಲಿ ಇದೆ ಎಂದು ಸಹಿ ಮಾಡಿದೆ.

ನಾನು ಆ ದಿನ ಠಾಣೆಯಿಂದ ನನ್ನ ಮಗಳ ಮನೆಗೆ ಬಂದನೋ ಅಥವಾ ಆಸ್ಪತ್ರೆಗೆ ಹೋದನೋ ಎಂದು ನೆನಪಿಲ್ಲ, ಆ ಮೇಲೆ ಸಹಿ ಮಾಡುವಾಗ ನಾನೂ ಸಾಯುವ ಪರಿಸ್ಥಿತಿಯಲ್ಲಿ ಇದ್ದೆ. ನನ್ನನ್ನು ಠಾಣೆಯಿಂದ ಯಾರೋ ವೈದ್ಯರ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ನಂತರ ಮನೆಗೆ ಕರೆದುಕೊಂಡು ಹೋದರು. ಯಾರು ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದು ನೆನಪಿಲ್ಲ, ಪೊಲೀಸ್ ಠಾಣೆಯಿಂದ ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋದರು ಎಂದು ನೆನಪಿಲ್ಲ, ನಾನು ಪೋಲೀಸ್ ಠಾಣೆಯಿಂದ ಹೋದ ನಂತರ ಆ ರಾತ್ರಿ ವೆಂಕಟೇಶ್ ರವರ ಮನೆಯಲ್ಲಿ ಇದ್ದೆ, ನಾನು ಆ ದಿನ ರಾತ್ರಿ ನಿದ್ದೆ ಮಾಡಲೇ ಇಲ್ಲ, ನಾನು ಬೆಳಗಿನ ಜಾವ ನನ್ನ ಮಗಳ ಮನೆಯ ಬಳಿ ಹೋಗಿದ್ದನೋ ಅಥವಾ ಇಲ್ಲವೋ ನೆನಪಿಲ್ಲ, ನಾನು ಮಾರನೆಯ ದಿನ ಬೆಳಿಗ್ಗೆ ನನ್ನ ಮಗಳ ಮತ್ತು ಮೊಮ್ಮಗಳ ಶವವನ್ನು ನೋಡಲಿಲ್ಲ.

ನಾನು ಬೆಂಗಳೂರಿನಿಂದ ನೇರವಾಗಿ ಪೊಲೀಸ್ ಠಾಣೆಗೆ ಬಂದು ದೂರು ನೀಡುತ್ತಿದ್ದೇನೆ ಎಂದು ಆಗಿನ ಪರಿಸ್ಥಿತಿಯಲ್ಲಿ ಹೇಳಿರಬಹುದು, ಹೇಳಿದ್ದೇನೋ ಇಲ್ಲವೋ ನೆನಪಿಲ್ಲ. ನಾನು ಆ ದಿನ ಶೋಕೇಸ್‌ನಲ್ಲಿ ಇಟ್ಟು ಬಂದಿದ್ದ 50/- ರೂ ಹಣವನ್ನು ಮತ್ತೆ ನೋಡಲಿಲ್ಲ. ನಾನು ಪುನಃ ನನ್ನ ಮಗಳ ಮನೆಗೆ ಯಾವತ್ತು ಹೋದೆ ಎಂದು ನೆನಪಿಲ್ಲ. ಮಾರನೆಯ ದಿನ ಪೊಲೀಸರು ನನ್ನನ್ನು ಮತ್ತು ನಾನು ಪೋಲೀಸರನ್ನು ಬೇಟಿಯಾದೆನೋ ಇಲ್ಲವೋ ನೆನಪಿಲ್ಲ. ನಾನು ಮಾರನೆಯ ದಿನ ದಪನ್ ಕಾರ್ಯ ನಮ್ಮ ಊರಿನಲ್ಲಿ ಆಗಿದ್ದುದರಿಂದ ಆ ದಿನ ಎಲ್ಲಿದ್ದನೋ ಎಂದು ನೆನಪಿಲ್ಲ. ನಾನು ದಪನ್‌ಗೆ ಹೋಗಿದ್ದೆ. ನಂತರ ನಾನು ಎಲ್ಲಿ ಇದ್ದೆ ಎಂದು ನೆನಪಿಲ್ಲ.

ನನಗೆ ಆ ರೀತಿ ನೆನಪಿನ ತೊಂದರೆ ನನ್ನ ಮಕ್ಕಳ ನೆನಪು ಬಂದಾಗಲೆಲ್ಲಾ ತೊಂದರೆಯಾಗುತ್ತಿತ್ತು. ಈಗಲೂ ಸಹ ಅವರ ಪೋಟೋಗಳನ್ನು ನೋಡಿದರೆ ಅದರ ನೆನಸಿಕೊಂಡರೆ ಆ ರೀತಿ ಆಗುತ್ತದೆ.

ನಾನು ದೂರಿನಲ್ಲಿ " ನಾನು ಮನು ಎನ್ನುವವನು ನೀರು ತರುತ್ತಾನೆ 50 ರೂ ಶೋಕೇಸ್‌ನಲ್ಲಿ ಇಟ್ಟಿದ್ದೇನೆ ಕೊಟ್ಟು ನೀರು ತೆಗೆದುಕೋ ಎಂದು ಹೇಳಿದಾಗ ನನ್ನ ಮಗಳು ತನ್ನ ಬಳಿ ಹಣ ಇದೆ ಎಂದು ಹೇಳಿದಳು, ನಂತರ ನಾನು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ 1ನೇ ಆರೋಪಿ ಇಂಡಿಕಾ ಕಾರಿನಲ್ಲಿ ನನ್ನ ಎದುರುಗಡೆ ಬಂದ, ಆಗ 1ನೇ ಆರೋಪಿ ಏನೋ ಮರೆತಿರಬಹುದು ಎಂದು ಅಂದುಕೊಂಡೆ, ನಂತರ ನಾನು ವೆಂಕಟೇಶ್ ರವರ ಮನೆಗೆ ಹೋಗಿ ಅಲ್ಲಿಂದ ಸುಧಾಕರ ರವರ ಮನೆಗೆ ಹೋದೆ, ಸುಧಾಕರ್ ರವರ ಬಳಿ ನನ್ನನ್ನು ನನ್ನ ಹೆಂಡತಿಯನ್ನು ಹೊಡೆದ ವಿಷಯ ಹೇಳಿದೆ, ನಂತರ ನಾನು ಬೆಳಿಗ್ಗೆ 11.30 ಕ್ಕೆ ಕೆಲಸಕ್ಕೆ ಹೋದೆ, ನಾನು ಕೆಆರ್‌ಪುರಂ ಬಿಟ್ಟ ಮುಂದೆ ಹೋದಾಗ ಮನು ನನಗೆ ಪೋನ್ ಮಾಡಿದ, ನಾನು ನಿಮ್ಮ ಮಗಳ ಮನೆಗೆ ನೀರು ತಂದಿದ್ದೇನೆ ಬಾಗಿಲು ತೆಗೆಯುತ್ತಿಲ್ಲ, ಯಾರಿದ್ದಾರೆ ಎಂದು ಕೇಳಿದ, ನನ್ನ ಮಗಳಿಗೆ ಪೋನ್ ಮಾಡಿದಾಗ ಆಕೆ ಪೋನ್ ತೆಗೆಯಲಿಲ್ಲ, ನಾನು ಗಾಬರಿಯಾಗಿ ನನ್ನ ಹೆಂಡತಿಗೆ ಪೋನ್ ಮಾಡಿದೆ, ನನ್ನ ಹೆಂಡತಿ ಮನೆಗೆ ಹೋಗಿ ಸುತ್ತಲೂ ನೋಡುತ್ತಿದ್ದು, ಆಕೆ ಕೂಗುತ್ತಿದ್ದುದು ನನಗೆ ಕೇಳಿಸಿ ಗಾಬರಿಯಾಗಿ ವೆಂಕಟೇಶ್ ರವರಿಗೆ ಪೋನ್ ಮಾಡಿದೆ" ಎಂದು ಹೇಳಿದ್ದೇನೋ ಇಲ್ಲವೋ ನೆನಪಿಲ್ಲ.

" ನಂತರ ನಾನು ಬೆಳಿಗ್ಗೆ 11.30 ಕ್ಕೆ ಕೆಲಸಕ್ಕೆ ಹೋದೆ, ನಾನು ಕೆಆರ್‌ಪುರಂ ಬಿಟ್ಟ ಮುಂದೆ ಹೋದಾಗ ಮನು ನನಗೆ ಫೋನ್ ಮಾಡಿದ " ಎಂದು ನಾನು ಪೊಲೀಸರ ಮುಂದೆ ಮರು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನೆನಪಿಲ್ಲ.

" ಅವರು ನನಗೆ ಫೋನ್ ಮಾಡಿ ನಾವು ರೂಮಿನ ಗಾಜನ್ನು ಹೊಡೆದು ಕಿಟಕಿ ಪರದೆಯನ್ನು ಸರಿಸಿ ನೋಡಿದಾಗ ನನ್ನ ಮಗಳು ಮತ್ತು ಮೊಮ್ಮಗಳು ಮಲಗಿದ ಸ್ಥಿತಿಯಲ್ಲಿದ್ದು ಸತ್ತು ಹೋಗಿದ್ದಾರೆಂದು ಹೇಳಿದರು, ನಾನು ವಾಪಸ್ಸು ಬರುವಾಗ 4.30 ಆಗಿತ್ತು, ನನ್ನ ಮಗಳು ಮತ್ತು ಮೊಮ್ಮಗಳು ಮಲಗಿದ ಸ್ಥಿತಿಯಲ್ಲಿ ತೀರಿಕೊಂಡಿದ್ದು ನನಗೆ ಪ್ರಜ್ಞೆ ಹೋಯಿತು'' ಎಂದು ದೂರಿನಲ್ಲಿ ಹೇಳಿಲ್ಲ ಎಂದರೆ ನೆನಪಿಲ್ಲ.

" ನನ್ನ ಮಗಳು ಮತ್ತು ಮೊಮ್ಮಗಳು ಮಲಗಿದ ಸ್ಥಿತಿಯಲ್ಲಿ ತೀರಿಕೊಂಡಿದ್ದು, ನನಗೆ ಪ್ರಜ್ಞೆ ಹೋಯಿತು " ಎಂದು ಮರು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನೆನಪಿಲ್ಲ. ಘಟನೆಯಾದ 15 ದಿನಕ್ಕೆ ನಾನು ನನ್ನ ಸಹಜ ಸ್ಥಿತಿಗೆ ಬಂದೆ, ಆದರೆ ನನ್ನ ಮಕ್ಕಳನ್ನು ನೆನಸಿಕೊಂಡರೆ ಈಗಲೂ ಸಹ ನನಗೆ ಪ್ರಜ್ಞೆ ತಪ್ಪುವ ಸ್ಥಿತಿ ಬರುತ್ತದೆ ಎಂದು ಹೇಳುತ್ತಾರೆ. ನಾನು ಸಹಜ ಸ್ಥಿತಿಗೆ ಬಂದ ನಂತರ ನನ್ನ ಮಗಳ ಮನೆಗೆ ಹೋಗಿದ್ದೆ. ನಾನು ಆ ರೀತಿ ನನ್ನ ಮಗಳ ಮನೆಗೆ ಹೋದಾಗ ಮನೆಯ ಮುಖ್ಯದ್ವಾರ ಒಂದು ಮೂಲೆಯಲ್ಲಿ ಹೊಡೆದು ಹಾಕಿದ್ದು ಕಾಣಿಸಿತು. ನನ್ನ ಮಗಳ ಬೆಡ್‌ರೂಂ ಬಾಗಿಲು ವೆಂಕಟೇಶ್ ತಳ್ಳಿದಾಗ ಅದು ಶೀಟ್‌ನದ್ದು, ಆಗಿದ್ದರಿಂದ ಮದ್ಯದಲ್ಲಿ ಹೊಡೆದು ಹೋಗಿತ್ತು.

ನಾನು 25,000/- ರೂ ವಾಪಸ್ಸು ಕೇಳಲು ಮನೆಯ ಮಾಲೀಕರ ಬಳಿ ಹೋದಾಗ ಈ ಎರಡೂ ಬಾಗಿಲುಗಳು ಜಖಂ ಆಗಿದ್ದ ವಿಷಯವನ್ನು ನನಗೆ ಹೇಳಿದರು, ಎಷ್ಟು ದಿನಕ್ಕೆ ಎಂದು ನೆನಪಿಲ್ಲ. ನನ್ನ ಹೆಂಡತಿ ಮತ್ತು ವೆಂಕಟೇಶ್ ದಿಃ 10-07-2013 ರಂದು ನನ್ನ ಮಕ್ಕಳು ತೀರಿಕೊಂಡ ವಿಷಯವನ್ನು ಬಿಟ್ಟು ಬೇರೆ ಯಾವುದೇ ವಿಷಯವನ್ನು ಹೇಳಲಿಲ್ಲ. ದಿಃ 10-07-2013 ರಂದು ಎರಡೂ ಬಾಗಿಲುಗಳನ್ನು ಹೊಡೆದು ಒಳಗೆ ಹೋದ ವಿಷಯವನ್ನು ವೆಂಕಟೇಶ್ ಮತ್ತು ನನ್ನ ಹೆಂಡತಿ ಅದೇ ದಿನ ಹೇಳಿದರು, ಆದರೆ ಸರಿಯಾಗಿ ನೆನಪಿಲ್ಲ. ಆ ಮನೆಯ ಮಾಲೀಕರು ಗೊತ್ತು, ಅದರೆ ಅವರ ಹೆಸರು ನೆನಪಿಲ್ಲ. ಶಿವಪ್ಪ ರವರ ಮಗಳು ಶಾಂತಮ್ಮ ಎನ್ನುವವರು ಇರುವುದು ಗೊತ್ತು.

ವೆಂಕಟೇಶಪ್ಪ ರವರು ಮನೆಯ ಮುಂಬಾಗಿಲನ್ನು ಹೊಡೆಯುವಷ್ಟರಲ್ಲಿ ಮನೆಯ ಮಾಲೀಕರಾದ ಶಾಂತಮ್ಮ ರವರು ಬೀಗದ ಕೈ ತಂದು ಕೊಟ್ಟರು ಎಂದು ಹೇಳಿದರು. ದಿಃ 10-07-2013 ರಂದು ನನ್ನ ಹೆಂಡತಿ ಮತ್ತು ವೆಂಕಟೇಶ್ ನನ್ನ ಮಕ್ಕಳ ಸಾವಿನ ವಿಷಯದಲ್ಲಿ ಏನೇನು ನಡೆಯಿತೋ ಎಂದು ಹೇಳಿದ್ದು ನೆನಪಿದೆ, ಆದರೆ ಆ ದಿನ ಹೇಳಿದರೋ ಅಥವಾ ಮಾರನೆಯ ಹೇಳಿದರೋ ನೆನಪಿಲ್ಲ. ನನ್ನ ಹೆಂಡತಿ ಮತ್ತು ವೆಂಕಟೇಶ್ ರವರು ಎರಡು ಬಾಗಿಲನ್ನು ಹೊಡೆದು ಒಳಗೆ ಹೋದೆವು ಎಂದು ಹೇಳಿದರು ಎಂದರೆ ಸರಿಯಲ್ಲ. ಮುಖ್ಯದ್ವಾರವನ್ನು ಕೀ ಮುಖಾಂತರ ತೆಗೆದು ಬೆಡ್‌ರೂಂನ ಬಾಗಿಲನ್ನು ತಳ್ಳಿದಾಗ ಅದು ಹೊಡೆದು ಹೋಗಿದೆ ಎಂದು ಹೇಳಿದರು ಎಂದು ಸ್ವತಃ ಹೇಳುತ್ತಾರೆ. ಈ ವಿಷಯವನ್ನು ನಾನು ದೂರು ಅಥವಾ ಮರು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನೆನಪಿಲ್ಲ. ಅವರಿಬ್ಬರು ಒಳಗೆ ಹೋದಾಗ ನನ್ನ ಮಗಳು ವೀಣ ಫ್ಯಾನ್‌ಗೆ ನೇಣು ಹಾಕಿಕೊಂಡು ನೇತಾಡುತ್ತಿದ್ದಳು ಎಂದರೆ ಸರಿಯಲ್ಲ. ಆ ರೀತಿ ಎರಡು ಬಾಗಿಲು ಹೊಡೆದು ಒಳಗೆ ಹೋದಾಗ ಪೊಲೀಸರು ಸಹ ಜೊತೆ ಇದ್ದರು ಎಂದು ನನಗೆ ಹೇಳಿದ್ದರು ಎಂದರೆ ನೆನಪಿಲ್ಲ.

ನನ್ನ ಹೆಂಡತಿ ವೆಂಕಟೇಶ್ ಮತ್ತು ಪೊಲೀಸರು ಆ ರೀತಿ ಬೆಡ್‌ರೂಂ ಒಳಗೆ ಹೋದಾಗ ಫ್ಯಾನ್‌ನಲ್ಲಿ ನೇತಾಡುತ್ತಿದ್ದ ನನ್ನ ಮಗಳ ಶವವನ್ನು ಕೆಳಗೆ ಇಳಿಸಿದೆವು ಎಂದು ಹೇಳಿದರು ಎಂದರೆ ಸರಿಯಲ್ಲ. ನನ್ನ ಮೊಮ್ಮಗಳನ್ನು ನನ್ನ ಮಗಳು ಸಾಯಿಸಿ ನಂತರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಆ ಎರಡೂ ಬಾಗಿಲುಗಳನ್ನು ಲಾಕ್ ಮಾಡಿದ್ದರಿಂದ ವೆಂಕಟೇಶ್ ರವರು ಕಿಟಕಿ ಗಾಜು ಒಡೆದು ಕರ್ಟನ್ ಸರಿಸಿ ನೋಡಿದೆವು ಎಂದು ಹೇಳಿದರು ಎಂದರೆ ಸರಿ. ಕಾರಣ ಅವರು ಆ ರೀತಿ ಕಿಟಕಿ ಗಾಜು ಹೊಡೆದು ಕಡ್ಡಿಯಿಂದ ಚುಚ್ಚಿ ನಿದ್ದೆ ಮಾಡುತ್ತಿರಬಹುದು ಎಂದು ನೋಡಿದ್ದು, ಅವರಿಬ್ಬರೂ ಎಚ್ಚರವಾಗದೇ ಇರುವುದರಿಂದ ಆಗ ಕುತ್ತಿಗೆಯಲ್ಲಿದ್ದ ಬಟ್ಟೆಗಳನ್ನು ಗಮನಿಸಿದ್ದಾಗಿ ಹೇಳಿದರು. ಈ ವಿಷಯವನ್ನು ನಾನು ದೂರು ಮತ್ತು ಮರು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನೆನಪಿಲ್ಲ. ಆ ಕಡ್ಡಿಯನ್ನು ನಾನು ನೋಡಲಿಲ್ಲ. ಆ ಕಿಟಕಿ ಗಾಜಿನ ಪೀಸ್‌ಗಳನ್ನು ನಾನು ನೋಡಿಲ್ಲ. ಕಿಟಕಿ ಒಡೆದಿದ್ದನ್ನು ನೋಡಿದೆ. ನಾನು ಅಡ್ವಾನ್ಸ್ ವಾಪಸ್ಸು ಕೇಳಲು ಹೋದಾಗ ಅವುಗಳನ್ನು ನೋಡಿದೆ.

ನನ್ನ ಮಗಳು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ಮರೆಮಾಚಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೊಮ್ಮಗಳನ್ನು ನನ್ನ ಮಗಳೇ ಸಾಯಿಸಿದ್ದು ಗೊತ್ತಿದ್ದರೂ ಸಹ ಮರೆಮಾಚಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶಿವಪ್ಪ ರವರಿಗೆ ಹಣ ಕೊಟ್ಟಿದ್ದ ಬಗ್ಗೆ ದಾಖಲಾತಿ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಅಗ್ರಿಮೆಂಟ್ ಕೊಟ್ಟಿರುತ್ತೇನೆ. ಪೋಲೀಸರು ದಾಖಲಾತಿಗಳನ್ನು ಕೇಳಿದ್ದಾಗ ಕೊಟ್ಟಿದ್ದು, ದಿನಾಂಕ ನೆನಪಿಲ್ಲ. ಆ ರೀತಿ ದಾಖಲೆಗಳನ್ನು ಕೊಟ್ಟಾಗ ಪೊಲೀಸರು ಮಹಜರ್ ಬರೆದುಕೊಂಡರೋ ಇಲ್ಲವೋ ಗೊತ್ತಿಲ್ಲ. ಆಗ ಪೊಲೀಸ್ ಠಾಣೆಗೆ ನನ್ನ ಜೊತೆ ಯಾರಾದರೂ ಬಂದಿದ್ದರೋ ಇಲ್ಲವೋ ನೆನಪಿಲ್ಲ. ಆ ರೀತಿ ದಾಖಲೆ ಕೊಟ್ಟಾಗ ನನ್ನ ಸಹಿಯನ್ನು ಪಡೆದುಕೊಂಡರೋ ಇಲ್ಲವೋ ನೆನಪಿಲ್ಲ. ಡಿವೈಎಸ್‌ಪಿ ಕಚೇರಿಯಲ್ಲಿ ಅಥವಾ ಪೊಲೀಸ್ ಠಾಣೆಯಲ್ಲಿ ಕೊಟ್ಟಿರಬಹುದು. ನನ್ನ ಮಗಳು ಸತ್ತ ಎಷ್ಟು ದಿನಕ್ಕೆ ಆ ದಾಖಲೆಗಳನ್ನು ತೆಗೆದುಕೊಂಡರು ಎಂದು ನೆನಪಿಲ್ಲ. ಆ ಪೈಲ್‌ಅನ್ನು ನನ್ನ ಮಗಳ ಮನೆಯಲ್ಲಿ ಇಟ್ಟುಕೊಂಡಿದ್ದೆ. ನಾನು ನನ್ನ ಸ್ವಾಧೀನದಲ್ಲಿ ನನ್ನ ದಾಖಲೆ ಮತ್ತು ಫೈಲ್‌ಗಳನ್ನು ಇಟ್ಟುಕೊಂಡಿರುತ್ತೇನೆ.

ದಿಃ 10-07-2013 ರಂದು ನಾನು ಬ್ರೀಟ್‌ಕೇಸ್ ಕಚೇರಿಗೆ ತೆಗೆದುಕೊಂಡು ಹೋಗಿದ್ದನೋ ಇಲ್ಲವೋ ನೆನಪಿಲ್ಲ. ದಿಃ 10-07-2013 ರಂದು ಆ ಬ್ರೀಟ್‌ಕೇಸ್ ಅನ್ನು ನನ್ನ ಮಗಳ ಮನೆಯಲ್ಲಿ ಬಿಟ್ಟು ಹೋಗಿದ್ದನೋ ಇಲ್ಲವೋ ನೆನಪಿಲ್ಲ. ಆ ದಿನ ಯಾವ ಫೈಲ್‌ನ್ನು ತೆಗೆದುಕೊಂಡು ಹೋಗಿದ್ದೆ ಎಂದು ನೆನಪಿಲ್ಲ. ನಾನು ಕಚೇರಿಯಿಂದ ಕೋಲಾರಕ್ಕೆ ಬರುವಾಗ ಬ್ರೀಟ್‌ಕೇಸ್ ಅಥವಾ ಫೈಲ್ ತಂದಿದ್ದೇನೋ ಇಲ್ಲವೋ ನೆನಪಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.